**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ</u>**

**<u>ಸಿ ಸಿ ನಂಃ 1670/2024</u>**

ಪಿರ್ಯಾದುದಾರರು : ಹಾರೋಹಳ್ಳಿ ಪೋಲೀಸ್ ಠಾಣೆ.

– ವಿರುದ್ಧ –

ಆರೋಪಿತರು ಃ ರಾಕೇಶ್ ಜಿ.ಎಸ್
ಬಿನ್ ಶಿವಣ್ಣ
ವಯಸ್ಸು 28 ವರ್ಷಗಳು
ವಾಸಃ ಗುಂಡನಗೊಲ್ಲಹಳ್ಳಿ ಗ್ರಾಮ
ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು

**:: ಆಪಾದನೆ ::**

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆಃ-**

ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಹಾರೋಹಳ್ಳಿ ಪೊಲೀಸ್ ಠಾಣಾ ಸರಹದ್ದು, ಮರಳವಾಡಿ ಹೋಬಳಿ, ಗಾಂಧಿಘಾರಂ ದಿಂದ ಗುಂಡನಗೊಲ್ಲಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಆಲಿಬಾಯ್ ಎಂಬುವರ ತೋಟದ ಬಳಿ ದಿನಾಂಕ: 13/09/2024 ರಂದು ಸಾಯಂಕಾಲ 5.30 ಗಂಟೆ ಸಮಯದಲ್ಲಿ ಚಾಸಾ-01 ಕೆಂಪಯ್ಯ ರವರು ಅವರ ಬಾಬ್ತು ಕೆಎ-42-ಹೆಚ್-9162 ನಂಬರಿನ ಹೀರೋ ಹೊಂಡಾ ಸ್ಪೆಂಡರ ಪ್ಲಸ್ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಚಾಸಾ 03 ನಾರಾಯಣಪ್ಪ ರವರನ್ನು ಕೂರಿಸಿಕೊಂಡು ಹಾರೋಹಳ್ಳಿ ಕಡೆಗೆ ಬರುತ್ತಿದ್ದಾಗ ಎದುರುಗಡೆಯಿಂದ ಬಂದ ಆರೋಪಿಯಾದ ನೀವು ವಿಮೆ ಚಾಲ್ತಿಯಲ್ಲಿ ಇಲ್ಲದ ನಿಮ್ಮ ಬಾಬ್ತು ಕೆಎ-19-ಝಡ್-5449 ನಂಬರಿನ ಹೊಂಡಾ ಸಿಟಿ ಕಾರನ್ನು ಅತಿವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಪೂರ್ಣ ಬಲಭಾಗಕ್ಕೆ ಬಂದು ಚಾಸಾ 01 ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿ ಸ್ಥಳದಲ್ಲಿ ಕಾರನ್ನು ನಿಲ್ಲಿಸದೇ ಹೊರಟು ಹೋಗಿದ್ದು, ಡಿಕ್ಕಿ ಹೊಡೆಸಿದ ಪರಿಣಾಮ ಚಾಸಾ-01 ಮತ್ತು ಚಾಸಾ-02 ಪಾರ್ವತಮ್ಮ ರವರಿಗೆ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯಗಳು ಉಂಟಾಗಿದ್ದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 281, 125(a), 125(b) ಸಹವಾಚಕ 187 ಮತ್ತು 196 ಐಎಂವಿ ಆಕ್ಟ್ ರಡಿ ಅಪರಾಧ ಮಾಡಿರುವಿರಿ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆಯೊಳಗೆ ನಡೆದಿದ್ದು ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರಿಪಡಿಸಿದ್ದೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 10.08.2026 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**

**<u>ಆರೋಪಿಯ ಹೇಳಿಕೆ</u>**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ ?

ಉತ್ತರ 1 ಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ 1 ಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**

ಆರೋಪಿಯ ಸಹಿ